

ಭಾರತಿ ದೇವಿ ಪಿ.

ಕಲೆ: ಸೌಮ್ಯಪ್ರಭು ಕಲ್ಯಾಣ್ಕರ್



# ಕೂಡಲಿ

ಹರಿದು ಬಂದದ್ದು ನಿಜ
ಎಲ್ಲವನ್ನು ಹರಿದುಕೊಂಡೇ ಹರಿದದ್ದು
ಮುಟ್ಟಿದ ದಡಗಳು, ತಟ್ಟಿದ ಎದೆಗಳು
ಉರುಳಿದ ಕಲ್ಲುಗಳು ಎಣೆಯಿರದಷ್ಟು
ಪಾತ್ರದುದ್ದಕ್ಕೂ ಮೇರೆಯಿರದ ಪಾತ್ರಗಳು
ಅಂಟದ ಸಿಲುಕದ, ಎಡೆ ಸಿಕ್ಕರೆ ಹರಿಯುವ
ಪತ್ರೆಗಳು

★

ತನು ಬತ್ತಿದಾಗ, ಬಾನೊಡೆದಾಗ
ಕಟ್ಟು, ಕಟ್ಟೆಗಳು ತಡೆದಾಗ
ಕೆಲವು ಪಡೆದ ಹಾದಿ,
ಕೆಲವು ಹೊರಳು ಹಾದಿ...
ಒಂದು ನಾಲ್ಕಾಗಿ ನಾಲ್ಕು ಒಂದಾಗಿ
ಭಿನ್ನ, ಅಭಿನ್ನವೇ ಭಿನ್ನವಾಗಿ
ಮೂಡುವ ಬಣ್ಣ, ಹೊಂದುವ ಆಕಾರ
ಅನಿತ್ಯ, ನಿರಾಕಾರ

★

ಎರಡಾಗಿ ನಾಲ್ಕಾಗಿ, ನಾಲ್ಕು ಒಂದಾಗಿ
ಒಂದು ಇನ್ನೊಂದನ್ನು
ಅಳಿಯದಂತೆ ಸೇರಿ
ಸೇರಿಯೂ ಬಣ್ಣಗೆಡದೆ ಅಭಿನ್ನವಾಗುವ
ನಿತ್ಯ ಸೋಜಿಗ...
ಹರಿದೂ ಹರಿಹರಿದೂ ಬೆರೆಯುವ
ಜೀವಗಳು, ಜೀವನದಿ
ತೊಟ್ಟು ತೊಟ್ಟು ತೊಟ್ಟಿಕ್ಕಿ ಮಡುಗಟ್ಟಿ
ಕಟ್ಟೊಟೆದು ಕೂಡಿಯೂ ಹರಿದು
ಪೂರ್ಣಕ್ಕೆ ಅಪೂರ್ಣವಾಗುವುದರಲ್ಲೇ
ನಿತ್ಯ ಮುಕ್ತಿ...

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68